ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2023/253 ದಿನಾಂಕ :10.02.2023

## ಸುತ್ತೋಲೆ-2

**ವಿಷಯ:** 2022-2023ನೇ ಸಾಲಿನ CBCS 5 ನೇ ಸೆಮಿಸ್ಟರ್ ರೆಗ್ಯೂಲರ / 1 ಮತ್ತು 3ನೇ ಸೆಮೆಸ್ಟರ್ ರಿಪಿಟರ್ಸ ಹಾಗೂ Non-CBCS 1, 3 ಮತ್ತು 5ನೇ ಸೆಮಿಸ್ಟರ್ ರಿಪಿಟರ್ಸ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಫೆಬ್ರುವರಿ-2023ರಲ್ಲಿ ಜರುಗಿಸುವ ಕುರಿತು.

**ಉಲ್ಲೇಖ:** ನಂ.ಕವಿವಿ/ಪರೀಕ್ಷಾ(ಗೌಪ್ಯ)/2023/240 ದಿನಾಂಕ: 30.01.2023.

*-*-*

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಸುವುದೇನೆಂದರೆ, 2022-2023ನೇ ಸಾಲಿನ CBCS 5 ನೇ ಸೆಮೆಸ್ಟರ್ ರೆಗ್ಯೂಲರ್/ 1 ಮತ್ತು 3ನೇ ಸೆಮೆಸ್ಟರ್ ರಿಪಿಟರ್ಸ ಹಾಗೂ Non-CBCS 1, 3 ಮತ್ತು 5ನೇ ಸೆಮಿಸ್ಟರ್ ರಿಪಿಟರ್ಸ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ತಮ್ಮ ಮಹಾವಿದ್ಯಾಲಯದ ಮಟ್ಟದಲ್ಲಿ ವೇಳಾಪಟ್ಟಿಯನ್ನು ತಯಾರಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಕ್ಕೆ ಎರಡು ಬ್ಯಾಚ್‌ಗಳಂತೆ ಅವಶ್ಯವಿದ್ದಲ್ಲಿ ಪ್ರತಿ ಬ್ಯಾಚ್‌ಗೆ 20 ವಿದ್ಯಾರ್ಥಿಗಳಂತೆ ದಿನಾಂಕ: **06.02.2023** ರಿಂದ **11.02.2023** ಒಳಗಾಗಿ ಜರುಗಿಸಲು ಮೇಲ್ಕಾಣಿಸಿದ ಉಲ್ಲೇಖ ದನ್ವಯ ತಿಳಿಸಲಾಗಿತ್ತು.

ಮುಂದುವರೆದು, CBCS 5 ನೇ ಸೆಮೆಸ್ಟರ್ ರೆಗ್ಯೂಲರ / 1 ಮತ್ತು 3ನೇ ಸೆಮೆಸ್ಟರ್ ರಿಪಿಟರ್ಸ ಹಾಗೂ Non-CBCS 1, 3 ಮತ್ತು 5ನೇ ಸೆಮಿಸ್ಟರ್ ರಿಪಿಟರ್ಸ ವಿದ್ಯಾರ್ಥಿಗಳಿಗೆ ಅನಿವಾರ್ಯ ಕಾರಣದಿಂದ ಯಾವ ಮಹಾವಿದ್ಯಾಲಯದವರು ಪ್ರಾಯೋಗಿಕ ಪರೀಕ್ಷೆ ಜರುಗಿಸಿರುವುದಿಲ್ಲವೋ ಅಂತಹ ಮಹಾವಿದ್ಯಾಲಯದವರು ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ: **16.02.2023** ರೊಳಗಾಗಿ ಜರುಗಿಸಲು ತಿಳಿಸಲಾಗಿದೆ.

ಸ್ನಾತಕ ತರಗತಿಗಳ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಬಾಹ್ಯ ಮತ್ತು ಆಂತರಿಕ ಪರೀಕ್ಷಕರು, ಪ್ರಾಚಾರ್ಯರ ಸಮ್ಮುಖದಲ್ಲಿ ಆಯಾ ಮಹಾವಿದ್ಯಾಲಯದಿಂದ CBCS 5ನೇ ಸೆಮಿಸ್ಟರ್ ರೆಗ್ಯೂಲರ್ / 1 ಮತ್ತು 3ನೇ ಸೆಮೆಸ್ಟರ್ ರಿಪಿಟರ್ಸ ಹಾಗೂ Non-CBCS 1, 3 ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರಾಯೋಗಿಕ ಅಂಕಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಿದ ನಮೂನೆಯಲ್ಲಿ ನಮೂದಿಸಿ ಆಂತರಿಕ ಪರೀಕ್ಷಕರ ಸಹಿಯೊಂದಿಗೆ ದ್ವಿ-ಪ್ರತಿಯಲ್ಲಿ ತಯಾರಿಸಿ ಒಂದು ಪ್ರತಿಯನ್ನು ಗಣಕಯಂತ್ರ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಪರೀಕ್ಷಾ ವಿಭಾಗದ ಅಧೀಕ್ಷರಿಗೆ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

10/2/23

ಕುಲಸಚಿವರು (ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.
4. ಪರೀಕ್ಷಾ ವಿಭಾಗದ ಎಲ್ಲ ಶಾಖೆಗಳ ಅಧೀಕ್ಷಕರ ಮಾಹಿತಿಗಾಗಿ.
5. ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.
6. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.